# ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ72ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಮೇಲಿನ ಹೇಳಿಕೆ

**ವಿಷಯ:-** ಕೋಲಾರ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕಾಮಗಾರಿಗಳನ್ನು ಪರಿಹರಿಸುವ ಸಲುವಾಗಿ, ಕೊರೆದಿರುವ ಕೊಳವೆ ಬಾವಿಗಳು ಹಾಗೂ ಇತರೆ ಕಾಮಗಾರಿಗಳಿಗೆ, ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಗಳಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರರವರು 1371 ಕಾಮಗಾರಿಗಳಿಗೆ ರೂ.4284.58ಲಕ್ಷಗಳಿಗೆ, ಆಯಾ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಘಟನೋತ್ತರ ಮಂಜೂರಾತಿಯನ್ನು ಪಡೆದುಕೊಳ್ಳಲಾಗಿದೆ. ಆದರೆ ಈ ಕಾಮಗಾರಿಗಳು ಯಾವುದೇ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಂಡಿರುವುದಿಲ್ಲ ಹಾಗೂ ಈಗಾಗಲೇ ಕಾಮಗಾರಿಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ 1371 ಕಾಮಗಾರಿಗಳಿಗೆ ರೂ.4284.58ಲಕ್ಷಗಳಿಗೆ ಸರ್ಕಾರದಿಂದ ಅನುಮೋದನೆ ನೀಡುವ ಬಗ್ಗೆ ಕಳೆದ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗಿದ್ದು, ಕ್ರಿಯಾ ಯೋಜನೆಗೆ ಅನುಮೋದನೆಯಾದ ಕಾಮಗಾರಿಗಳಿಗೆ ಬೇಡಿಕೆಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಪ್ರಸ್ತುತ, ಅನುದಾನ ಬಿಡುಗಡೆಗೆ ಯಾವುದೇ ಬಾಕಿಯಿರುವುದಿಲ್ಲ. ಆದರೆ ಕ್ರಿಯಾ ಯೋಜನೆಯಲ್ಲಿ ಇಲ್ಲದೆ ಕೈಗೊಂಡ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲವೆಂದು ಸರ್ಕಾರವು ಹೇಳಿಕೆ ನೀಡಿರುತ್ತದೆ.

ಆದರೆ, ಕೋಲಾರ-132, ಮಾಲೂರು-183, ಬಂಗಾರಪೇಟೆ-139, ಕೆ.ಜಿ.ಎಫ್.-153, ಮುಳಬಾಗಿಲು-246 ಹಾಗೂ ಶ್ರೀನಿವಾಸಪುರ-518 ಕಾಮಗಾರಿಗಳು ಈ ಭಾಗದ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗುತ್ತಿದ್ದ ಹಿನ್ನಲೆಯಲ್ಲಿ ಸ್ಥಳೀಯ ಶಾಸಕರ ಹಾಗೂ ಜನಪ್ರತಿನಿಧಿಗಳ ಕೋರಿಕೆ ಮೇರೆಗೆ ತುರ್ತಾಗಿ ಈ ಕಾಮಗಾರಿಗಳನ್ನು ಕೈಗೊಂಡಿರುತ್ತಾರೆ. ಆದ ಕಾರಣ ಈಗಾಗಲೇ ಆಯಾ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಘಟನೋತ್ತರ ಮಂಜೂರಾತಿ ಪಡೆದಿರುವ ಆಧಾರದ ಮೇಲೆ ಇದನ್ನು ಕ್ರಿಯಾಯೋಜನೆಗೆ ಸೇರಿಸಿಕೊಂಡು ರೂ.4284.58ಲಕ್ಷ ಹಣವನ್ನು ಬಿಡುಗಡೆ ಮಾಡಬೇಕಾಗಿರುವ ಕುರಿತು.

********

**ಹೇಳಿಕೆ:-** ಕೋಲಾರ ಜಿಲ್ಲೆಯಲ್ಲಿ ಸುಸ್ಥಿರ ಮೇಲ್ಮೈ ಜಲಮೂಲದ ಅಭಾವ ಇರುವುದರಿಂದ ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿ ಆಧರಿಸಿ ಕುಡಿಯುವ ನೀರು ಒದಗಿಸಲಾಗುತ್ತಿದೆ. ಬರಗಾಲದ ಹಿನ್ನೆಲೆಯಲ್ಲಿ ಕೊಳವೆಬಾವಿ ಕೊರೆಯಲು ಬೇಕಾಗುವ ಅನುದಾನವನ್ನು ಲಭ್ಯತೆಗನುಗುಣವಾಗಿ ಒದಗಿಸಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಕೊಳವೆಬಾವಿ ಕೊರೆಯಲು, ಕೊರೆದ ಕೊಳವೆ ಬಾವಿಗೆ ಪಂಪು ಮೋಟಾರ್ ಮತ್ತು ಪೈಪ್‌ಲೈನ್ ಅಳವಡಿಸಲು 2019-20ನೇ ಸಾಲಿನಿಂದ 2022-23ನೇ ಸಾಲಿನವರೆಗೆ ಇಲಾಖೆಯ ಯೋಜನೆಗಳಾದ ಟಾಸ್ಕ್‌ಫೋರ್ಸ್ ಎಸ್.ಡಿ.ಪಿ, ಹಾಗೂ ಇತರೆ ಅನುದಾನಗಳಲ್ಲಿ ಈ ಕೆಳಕಂಡಂತೆ ಬಿಡುಗಡೆ ಹಾಗೂ ವೆಚ್ಚವಾಗಿರುವ ವಿವರಗಳು ಇಂತಿದೆ; (ರೂ.ಲಕ್ಷಗಳಲ್ಲಿ)

| ಕ್ರ.ಸಂ | ವರ್ಷ | ಬಿಡುಗಡೆಯಾದ ಅನುದಾನ | ವೆಚ್ಚವಾದ ಅನುದಾನ |
|---|---|---|---|
| 01 | 2019-20 | 3210.72 | 2896.76 |
| 02 | 2020-21 | 1379.39 | 1360.64 |
| 03 | 2021-22 | 1027.33 | 757.45 |
| 04 | 2022-23 | 74.50 | 74.50 |

ಕೊಳವೆ ಬಾವಿಗಳು ಕೊರೆಯುವುದಕ್ಕೆ ಮತ್ತು ಅಳವಡಿಸಿರುವ ಪಂಪು ಮೋಟಾರು ಮತ್ತು ಪೈಪ್‌ಲೈನ್‌ಗಳಿಗೆ ತಾಲ್ಲೂಕು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಮಂಜೂರಾತಿ ಪಡೆದು ಕೋಲಾರ ಜಿಲ್ಲೆಯಲ್ಲಿ 1371 ಕಾಮಗಾರಿಗಳಿಗೆ ರೂ.4284.58ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಘಟನೋತ್ತರ ಮಂಜೂರಾತಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಕಾಮಗಾರಿಗಳು 2018-19 ಮತ್ತು 2019-20ನೇಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಸೇರ್ಪಡೆಗೊಳ್ಳದ ಕಾರಣದಿಂದ ಅನುಮೋದನೆಗೆ ಪರಿಗಣಿಸಿರುವುದಿಲ್ಲ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ತಾಲ್ಲೂಕು | ಕಾಮಗಾರಿಗಳಸಂಖ್ಯೆ | ಅಂದಾಜುಮೊತ್ತ |
|---|---|---|---|
| 01 | ಕೋಲಾರ | 132 | 621.33 |
| 02 | ಮಾಲೂರು | 183 | 662.31 |
| 03 | ಬಂಗಾರಪೇಟೆ | 139 | 395.07 |
| 04 | ಕೆ.ಜಿ.ಎಫ್ | 153 | 473.72 |
| 05 | ಮುಳಬಾಗಿಲು | 246 | 710.15 |
| 06 | ಶ್ರೀನಿವಾಸಪುರ | 518 | 1422.00 |
| | ಒಟ್ಟು | **1371** | **4284.58** |

ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಬೇಡಿಕೆಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಕ್ರಿಯಾಯೋಜನೆಯಲ್ಲಿ ಇಲ್ಲದೆ ಕೈಗೊಂಡ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಅದರಂತೆ, ದಿನಾಂಕ:19.02.2021ರಿಂದ ಟಾಸ್ಕ್‌ಫೋರ್ಸ್, ಎಸ್.ಡಿ.ಪಿ ಕ್ರಿಯಾ ಯೋಜನೆಗಳಲ್ಲಿ 178 ಕಾಮಗಾರಿಗಳಿಗೆ (173 ಕೊಳವೆಬಾವಿ ಹಾಗೂ 5 ಪಂಪು ಮೋಟಾರುಗಳು ಕಾಮಗಾರಿಗಳು ಒಳಗೊಂಡಂತೆ) ರೂ.567.53ಲಕ್ಷಗಳಷ್ಟು ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಸೇರ್ಪಡಿಸಿಕೊಂಡು ವೆಚ್ಚಗೊಳಿಸಲಾಗಿದೆ.

**ಕಡತ ಸಂ:ಗ್ರಾಕುನೀ&ನೈಇ/34/ಅಧೀಕ್ಷಕರು-1/2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ